ಅಧ್ಯಕ್ಷರು.—ನಿಮ್ಮದು ಮೊಟ್ಟ ಮೊದಲೇ ಇತ್ತು. ನೀವು ಆವಾಗ ಎಲ್ಲಿ ಹೋಗಿದ್ದೀರಿ ? ನೀವು ಯಾವಾಗ ಬೇಕಾದರೂ ಬಂದು ಕೇಳುವುದಕ್ಕಾಗುವುದಿಲ್ಲ.

ಬಸವರಾಜ ಹವಗಪ್ಪ ಪಾಟೀಲ್.—ಅಧ್ಯಕ್ಷರೇ, ನಾನು ಓದುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ಓದಿ.

(೨೨) ಹಂಮ್ಮಾಬಾದಿನಲ್ಲಿ ಬಾಲಿಕಾ ಪ್ರೌಢಶಾಲೆಯ ಕಟ್ಟಡ ಕಟ್ಟಿಸುವ ಬಗ್ಗೆ

ಶ್ರೀ ಬಸವರಾಜ ಹವಗಪ್ಪ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸುಮಾರು ಆರು ತಿಂಗಳ ಹಿಂದೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಹುಮ್ಮಾಬಾದಿನಲ್ಲಿ ಬಾಲಿಕೆಯರ ಪ್ರೌಢಶಾಲೆಯ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿದ್ದು ಈವರೆಗೂ ನಿರ್ಮಾಣದ ಬಗ್ಗೆ ಯಾವುದೇ ಕ್ರಮ ಕೈಕೊಂಡಿರುವುದಿಲ್ಲ. ಅಧಿಕಾರಿಗಳನ್ನು ಕೇಳಿದ್ದಲ್ಲಿ ಸರಕಾರದಿಂದ ನಮಗೆ ಯಾವ ಆದೇಶವೂ ಬಂದಿಲ್ಲ ಮತ್ತು ಈ ಬಗ್ಗೆ ಮಂಜೂರಾತಿಯೂ ಇರುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಕ್ರಮವನ್ನೇನಾದರೂ ಕೈಗೊಳ್ಳುವಿರಾ ಆಥವಾ ಇಲ್ಲವಾ ಎಂಬ ಬಗ್ಗೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಹೇಳಿಕೆ ನೀಡ ಬೇಕೆಂದು ಒತ್ತಾಯಿಸುತ್ತೇನೆ.

(ಸಂಬಂಧಪಟ್ಟ ಸಚಿವರು ಸದನದಲ್ಲಿ ಇರಲಿಲ್ಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲಿ ಕೇಳುವವರೂ ಇಲ್ಲ, ಹೇಳುವವರೂ ಇಲ್ಲ.

ಅಧ್ಯಕ್ಷರು.—ಯಾವುದೇ ಒಬ್ಬರು ಮಂತ್ರಿಗಳು ಹೇಳಿದರೆ ಆಗುವುದಿಲ್ಲವೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಬಸವರಾಜ ಹವಗಪ್ಪ ಪಾಟೀಲ್.—ನಮ್ಮ ಪ್ರಶ್ನೆಗೆ ಯಾರು ಸರಿಯಾದ ಉತ್ತರವನ್ನೇ ಕೊಡುವುದಿಲ್ಲ.

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತಾರೆ. ಏನು ಆಗಬೇಕೋ ಅದನ್ನು ಮಾಡಿಸುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಏನೂ ಉತ್ತರ ಕೊಡುವುದಿಲ್ಲ, ಏನೂ ಆಗುವುದೂ ಇಲ್ಲ.

ಅಧ್ಯಕ್ಷರು.—ತಾವು ಮಾತಾಡಿ.

ಮಂತ್ರಿಯವರ ಹೇಳಿಕೆ

ಪೌರ ಕಾರ್ಮಿಕರ ಬೇಡಿಕೆಗಳ ಬಗ್ಗೆ

ಶ್ರೀ ಎ. ಕೃಷ್ಣಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸ್‌ರವರು ಹಿಂದೆ ಮುನಿಸಿಪಲ್ ಎಂಪ್ಲಾಯೀಸ್ ಮತ್ತು ಕೆ. ಸಿ. ಎಸ್. ಆರ್. ಅನ್ವಯ ಮಾಡುವ ಬಗ್ಗೆ ಪ್ರಶ್ನೆ ಕೇಳಿದ್ದರು. ಅವರು ಹೇಳಿದಂಥ ರೀತಿಯಲ್ಲಿ ಸರ್ಕಾರ ಆಜ್ಞೆ ಹೊರಡಿಸಿದೆ, ಈ ಬಗ್ಗೆ ನಾಲ್ಕು ಮಾತನ್ನು ಹೇಳುತ್ತೇನೆ.

In the last session of the Legislature, Hon'ble Members are aware, that I had given an assurance to consider Sympathetically the demands Putforth by the Municipal Civil Employees throughout the State. I had Convened a number of meetings with the concerned office bearers and the officers of my department. The main demand related to application of K. C. S. R. to Municipal Civil Employees.